2018 ಕ.ತೀ.ವ 50

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

ಶ್ರೀ ಯಶೋಧರ ವಿಠಲ ಶೆಟ್ಟಿ –ವಿರುದ್ಧ– ಶ್ರೀಮತಿ ಪೂರ್ಣಿಮ*

ಕೌಟುಂಬಿಕ ನ್ಯಾಯಾಲಯಗಳ ಅಧಿನಿಯಮದ 19(1)ನೇ ಪ್ರಕರಣದ ಮೇರೆಗಿನ ಸಂಕೀರ್ಣ ಮೊದಲ ಅಪೀಲು.

ಹಿಂದೂ ವಿವಾಹ ಅಧಿನಿಯಮದ 12(1)(ಬಿ)(ಸಿ) ಪ್ರಕರಣ.

ಹಿಂದೂ ವಿವಾಹ ಅಧಿನಿಯಮದ 12(1)(ಬಿ)(ಸಿ) ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ಅನುಮತಿಸಿ ದಕ್ಷಿಣ ಕನ್ನಡ, ಮಂಗಳೂರಿನ ಕೌಟುಂಬಿಕ ನ್ಯಾಯಾಲಯಗಳ ಪ್ರಧಾನ ನ್ಯಾಯಾಧೀಶರು ಎಂ.ಸಿ.ಸಂ.41/2014 ರಲ್ಲಿ ದಿನಾಂಕ 10.07.2015 ರಂದು ನೀಡಿದ ತೀರ್ಪು ಮತ್ತು ಐತೀರ್ಪನ್ನು ಪ್ರಶ್ನಿಸಿ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

ಈ ಅಧಿನಿಯಮದ 25ನೇ ಪ್ರಕರಣ, ಈ ಅಧಿನಿಯಮದ ಅಡಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದ ಯಾವುದೇ ನ್ಯಾಯಾಲಯ, ಯಾವುದೇ ಡಿಕ್ರಿಯನ್ನು ಮಾಡಿದ ಸಮಯದಲ್ಲಿ ಖಾಯಂ ವಾದಕಾಲೀನ ಜೀವನಾಂಶ/ಜೀವನಾಂಶ ನೀಡುವುದಕ್ಕೆ ಅಧಿಕಾರಗಳನ್ನು ನೀಡಲಾಗಿದೆಯೆಂಬ ಉಪಬಂಧ'ವು ಸಮರ್ಥನೀಯವಾಗಿದೆ. ಈ ಅಧಿನಿಯಮದ 25ನೇ ಪ್ರಕರಣದಲ್ಲಿ ನಮೂದಿಸಲಾದ 'ಪತ್ನಿ ಅಥವಾ ಪತಿ' ಎಂಬ ಪದಗಳನ್ನು, ಯಾವುದೇ ಡಿಕ್ರಿಯನ್ನು ಮಾಡಿದ ಸಮಯದಲ್ಲಿ ಸಂಬಂಧಿಸಿದ ಪದಗಳಿಂದ ಪರಿಣಾಮತ್ವವನ್ನು ಪಡೆದುಕೊಂಡಿವೆ. ಈ ಅಧಿನಿಯಮದ 25ನೇ ಪ್ರಕರಣವನ್ನು ಸಾವಕಾಶವಾಗಿ ಓದಿದಾಗ, ಅಧಿನಿಯಮದ ಮೇರೆಗೆ (ಯಾವುದೇ ಡಿಕ್ರಿ) ವಿವಾಹವನ್ನು ಅನೂರ್ಜಿತವೆಂದು ಘೋಷಿಸಿದ ವಿವಾಹದ

*ಸಂಕೀರ್ಣ ಮೊದಲ ಅಪೀಲು ಸಂಖ್ಯೆ: 7801/2015 (ಎಫ್‌ಸಿ), ದಿನಾಂಕ: 19ನೇ ಜನವರಿ, 2016.

ಪ್ರಕರಣಗಳಲ್ಲಿ ಸಹ ಖಾಯಂ ವಾದಕಾಲೀನ ಜೀವನಾಂಶ/ಜೀವನಾಂಶವನ್ನು ಕ್ಲೇಮು ಮಾಡಲು ಪತ್ನಿಯು ತನ್ನ ಹಕ್ಕನ್ನು ಯಾರು ಕಸಿದುಕೊಳ್ಳಲಾಗದು ಎಂಬುದನ್ನು ಸೂಚಿಸುತ್ತದೆ. ಹಾಗಾಗಿ, ಅಪೀಲುದಾರ ಮತ್ತು ಪ್ರತ್ಯರ್ಜಿದಾರರ ನಡುವೆ ವಿಧಿವತ್ತಾಗಿ ನಡೆದಿದ್ದ ವಿವಾಹವನ್ನು ಶೂನ್ಯಗೊಳಿಸುವ ಡಿಕ್ರಿಯಿಂದ ರದ್ದುಗೊಳಿಸಲಾಗಿದ್ದರೂ, ಈ ಅಧಿನಿಯಮದ 25ನೇ ಪ್ರಕರಣ, ಅನ್ವಯಿಸುತ್ತದೆಯೆಂದು ನಾವು ಅಭಿಪ್ರಾಯಪಟ್ಟಿದ್ದೇವೆ. ಕೌಟುಂಬಿಕ ನ್ಯಾಯಾಲಯ ಐತೀರ್ಪು ನೀಡಿದ ಖಾಯಂ ವಾದಕಾಲೀನ ಜೀವನಾಂಶ ಅಥವಾ 3,00,000/– ರೂಪಾಯಿಗಳ ಜೀವನಾಂಶ, ಮೊಬೈಲ್ ಅಂಗಡಿಯನ್ನು ನಡೆಸುತ್ತಿರುವ ಅಪೀಲುದಾರನು ವ್ಯಾಪಾರಕ್ಕೆ ಅಭಿಮುಖವಾಗಿ ಆಕೆಯ ಜೀವನಕ್ಕಾಗಿ ವೈದ್ಯಕೀಯ ನೆರವು, ಆಹಾರ, ಬಟ್ಟೆ ಮತ್ತು ಆಸರೆಗಾಗಿ ಇಲ್ಲಿನ ಪ್ರತ್ಯರ್ಜಿದಾರರ ಈ ಪ್ರಕರಣದ ವಾಸ್ತವಿಕ ಹಿನ್ನೆಲೆಯಲ್ಲಿ ಪರಿಗಣನೆಗೆ ತೆಗೆದುಕೊಂಡಿರುವುದು ಸಮರ್ಥನಿಯವಾಗಿದೆ ಮತ್ತು ಈ ನ್ಯಾಯಾಲಯದಿಂದ ಯಾವುದೇ ಹಸ್ತಕ್ಷೇಪವನ್ನು ಸಮರ್ಥಿಸಲಾಗದು. ಕೌಟುಂಬಿಕ ನ್ಯಾಯಾಲಯದ ತೀರ್ಪಿನ ದಿನಾಂಕದಿಂದ ಜಾರಿಯಾಗಿ ಶೂನ್ಯವಾಗಿರುವ ವಿವಾಹವನ್ನು ಘೋಷಿಸಿದ ತೀರ್ಪಿನ ಭಾಗವು ಅಂಗೀಕರಿಸಲಾಗಿದೆ/ಅಪೀಲುದಾರನಿಂದ ಪ್ರಶ್ನಿಸಲಾಗಿರುವುದಿಲ್ಲವೆಂಬ ಟಿಪ್ಪಣಿಯು ಸಹ ಮಹತ್ವದಾಗಿದೆ. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಅವಲಂಬಿಸಿರುವ ಆ ತೀರ್ಪು, ಈ ಪ್ರಕರಣದ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

ಅಪೀಲನ್ನು ವಜಾಗೊಳಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

1. *ಐಎಲ್ಆರ್ 1996 ಕೆಎಆರ್ 3615*
   *ಗುರುಬಸಮ್ಮ –ವಿರುದ್ಧ–*
   *ಈರವ್ವ ಮತ್ತು ಇತರರು* *(ಉಲ್ಲೇ) 4*

ಅಪೀಲುದಾರನ ಪರ: ಶ್ರೀ ಎಂ. ವಿನೋದ್ ಕುಮಾರ್–ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ:**

ಈ ಅಪೀಲು, ಕೌಟುಂಬಿಕ ನ್ಯಾಯಾಲಯ, ದಕ್ಷಿಣ ಕನ್ನಡ ಮಂಗಳೂರು ಎಂ.ಸಿ. ಸಂ.41/2014 ರಲ್ಲಿ ದಿನಾಂಕ 10.07.2015 ರಂದು ನೀಡಿದ ತೀರ್ಪು ಮತ್ತು ಡಿಕ್ರಿಯ ಮೂಲಕ ತೀರ್ಪಿನ ದಿನಾಂಕದಿಂದ ಮೂರು ತಿಂಗಳೊಳಗೆ 3,00,000/– ರೂಪಾಯಿಗಳನ್ನು ಖಾಯಂ ವಾದಕಾಲೀನ ಜೀವನಾಂಶ ಸಂದಾಯ ಮಾಡುವುದಕ್ಕೆ ಅಪೀಲುದಾರನಿಗೆ ನಿರ್ದೇಶಿಸಿ ನೀಡಿದ ತೀರ್ಪಿನ ಭಾಗದಷ್ಟು ಮಾತ್ರದ ವಿರುದ್ಧ ನಿರ್ದೇಶಿಸುವಂತೆ ಕೋರಲಾಗಿದೆ.

2. ಸಂಕ್ಷಿಪ್ತವಾದ ಸಂಗತಿಗಳು ಈ ಮುಂದಿನಂತಿವೆ:

ದಿನಾಂಕ 10.11.2013 ರಂದು ಕಟೀಲು ಪಟ್ಟಣದಲ್ಲಿ, ಅಪೀಲುದಾರನು ಪ್ರತ್ಯರ್ಜಿದಾರಳನ್ನು ವಿವಾಹವಾಗಿದ್ದಾನೆ. ಪ್ರತ್ಯರ್ಜಿದಾರಳು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವುದು ಮದುವೆಯ ದಿನ ತನ್ನ ಗಮನಕ್ಕೆ ಬಂತೆಂದು, ಕೂಡಲೇ ಅದನ್ನು ಪ್ರತ್ಯರ್ಜಿದಾರಳ ಕುಟುಂಬದವರಿಗೆ ತಿಳಿಸಲಾಯಿತೆಂದು, ಆಗ ಅವರು ಪ್ರತ್ಯರ್ಜಿದಾರಳನ್ನು ತಮ್ಮ ಮನೆಗೆ ಕರೆದುಕೊಂಡು ಹೋದರೆಂದು, ಅಂದಿನಿಂದ ತಾವಿಬ್ಬರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆಂದು ಅಪೀಲುದಾರನು ತಿಳಿಸಿದ್ದಾನೆ. ಅಪೀಲುದಾರ ಮತ್ತು ಪ್ರತ್ಯರ್ಜಿದಾರರ ನಡುವೆ ದಿನಾಂಕ 10.11.2013 ರಂದು ವಿಧಿವತ್ತಾಗಿ ನಡೆದ ವಿವಾಹವನ್ನು ಅಕೃತ ಮತ್ತು ಶೂನ್ಯವೆಂದು ಘೋಷಿಸಬೇಕೆಂದು ಹಿಂದು ವಿವಾಹ ಅಧಿನಿಯಮ, 1955 (ಸಂಕ್ಷಿಪ್ತವಾಗಿ ಈ ಅಧಿನಿಯಮ)ರ 12(1)(ಎ) ಮತ್ತು (ಸಿ) ಪ್ರಕರಣದ ಅಡಿಯಲ್ಲಿ ಕೌಟುಂಬಿಕ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು ಇವರ ಮುಂದೆ ಅಪೀಲುದಾರನು ಅರ್ಜಿಯನ್ನು ದಾಖಲು ಮಾಡಿದ್ದಾನೆ, ಪ್ರತ್ಯರ್ಜಿದಾರರು, ಕೌಟುಂಬಿಕ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ. ನ್ಯಾಯಾಲಯ ಪಾಲಕರನ್ನು ನೇಮಿಸಿದೆ. ಪಕ್ಷಕಾರರು ದಾಖಲೆ ಮೇಲೆ ಮಂಡಿಸಲಾದ ಸಾಕ್ಷ್ಯವನ್ನು ಸವಿಸ್ತಾರವಾಗಿ ಪರಿಗಣಿಸಿದ ತರುವಾಯ ಅಧಿವಿಚಾರಣಾ ನ್ಯಾಯಾಲಯ, ಈ ತೀರ್ಪಿನ ದಿನಾಂಕದಿಂದ ಜಾರಿಗೆಬರುವಂತೆ

ಶೂನ್ಯಗೊಳಿಸುವ ಡಿಕ್ರಿಯನ್ನು ಮಂಜೂರು ಮಾಡುವುದರ ಮೂಲಕ, ದಿನಾಂಕ 10.11.2013 ರಂದು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆದಿದ್ದ ಪ್ರತ್ಯರ್ಜಿದಾರರೊಂದಿಗಿನ ಅರ್ಜಿದಾರನ ವಿವಾಹವನ್ನು ವಿಘಟನೆ ಮಾಡುವ ಮೂಲಕ ಅರ್ಜಿದಾರನು ದಾಖಲು ಮಾಡಿದ್ದ ಅರ್ಜಿಯನ್ನು ಅಂಗೀಕರಿಸಲಾಗಿದೆ. ಆದ್ಯಾಗ್ಯೂ, ಈ ತೀರ್ಪಿನ ದಿನಾಂಕದಿಂದ ಮೂರು ತಿಂಗಳೊಳಗೆ ಪ್ರತ್ಯರ್ಜಿದಾರರಿಗೆ ಒಟ್ಟು ಮೊತ್ತ 3.00 ಲಕ್ಷ ರೂಪಾಯಿಗಳನ್ನು ಖಾಯಂ ವಾದಕಾಲೀನ ಜೀವನಾಂಶ ಸಂದಾಯಮಾಡುವಂತೆ ಅಪೀಲುದಾರನಿಗೆ ನಿರ್ದೇಶಿಸಲಾಗಿದೆ.

3. ಅಪೀಲುದಾರನು ಪ್ರತ್ಯರ್ಜಿದಾರರಿಗೆ ಖಾಯಂ ವಾದಕಾಲೀನ ಜೀವನಾಂಶದಂತೆ 3.00 ಲಕ್ಷ ರೂಪಾಯಿಗಳ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಅಪೀಲುದಾರನಿಗೆ ನಿರ್ದೇಶಿಸಿದಷ್ಟರ ಮಟ್ಟಿಗಿನ ತೀರ್ಪಿನ ಮತ್ತು ಡಿಕ್ರಿಯ ಭಾಗದಿಂದ ಬಾಧಿತನಾಗಿದ್ದು, ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ.

4. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ಅಹವಾಲನ್ನು ಆಲಿಸಲಾಗಿದೆ.

ವಿವಾಹ ನಡೆದಿರುವುದೇ, ಸುಸ್ಥಾಪಿತವಾಗಿಲ್ಲದಿರುವಾಗ ಮತ್ತು ವಿವಾಹವು ಅಕೃತ ಮತ್ತು ಶೂನ್ಯವಾದುದೆಂದು ಅಧಿವಿಚಾರಣಾ ನ್ಯಾಯಾಲಯ ಅಭಿಪ್ರಾಯಪಟ್ಟಿರುವುದರಿಂದ ಅಪೀಲುದಾರನಿಗೆ ಖಾಯಂ ವಾದಕಾಲೀನ ಜೀವನಾಂಶ ನೀಡುವಂತೆ ನಿರ್ದೇಶಿಸುವಂತಿಲ್ಲವೆಂದು ಮಾನ್ಯ ನ್ಯಾಯವಾದಿಯು ವಾದವನ್ನು ಮಂಡಿಸಿದ್ದಾರೆ. ಕೌಟುಂಬಿಕ ನ್ಯಾಯಾಲಯ, ಯುಕ್ತ ಸಮೀಚೀನ ದೃಷ್ಟಿಯಿಂದ ಖಾಯಂ ವಾದಕಾಲೀನ ಜೀವನಾಂಶಕ್ಕೆ ಸಂಬಂಧಿಸಿದ ನಿಯಮಗಳನ್ನು ವಿವೇಚಿಸಲು ವಿಫಲವಾಗಿದೆ. ಈ ಸಂದರ್ಭಗಳಲ್ಲಿ, ಪ್ರತ್ಯರ್ಜಿದಾರಳು, ಕೌಟುಂಬಿಕ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ ಮತ್ತು ಅರ್ಜಿದಾರನ ಆದಾಯ ಮತ್ತು ಪ್ರತ್ಯರ್ಜಿದಾರಳ ವೆಚ್ಚಗಳನ್ನು ರುಜುವಾತು ಪಡಿಸುವ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ, ಖಾಯಂ ವಾದಕಾಲೀನ ಜೀವನಾಂಶದ ಬಹುದೊಡ್ಡ ಮೊತ್ತವನ್ನು ಆದೇಶಿಸುವ

ಮೂಲಕ ಕೌಟುಂಬಿಕ ನ್ಯಾಯಾಲಯ ತಪ್ಪು ಮಾಡಿದೆಯೆಂದು ಮುಂದುವರೆದು ವಾದಿಸಿದ್ದಾರೆ. ತನ್ನ ವಾದಕ್ಕೆ ಪೂರಕವಾಗಿ, ವರದಿ ಮಾಡಿದ, ***ಗುರುಬಸವಮ್ಮ –ವಿರುದ್ಧ– ಈರಮ್ಮ ಮತ್ತು ಇತರರು*** [1], ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಮಾನ್ಯ ನ್ಯಾಯವಾದಿಯು ಅವಲಂಬಿಸಿದ್ದಾರೆ.

5. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಮಾಡಿದ ವಾದಗಳನ್ನು ನಾವು ಪರಿಗಣಿಸಿದ್ದೇವೆ ಮತ್ತು ದಾಖಲೆ ಮೇಲಿನ ಸಾಮಗ್ರಿಯನ್ನು ಪರಿಶೀಲಿಸಲಾಗಿದೆ.

6. ಅಪೀಲುದಾರನ ವಿವಾಹವು, ಅವರ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಸಂಪ್ರದಾಯ ಮತ್ತು ಪದ್ಧತಿಗಳ ಪ್ರಕಾರ ದಿನಾಂಕ 10.11.2013 ರಂದು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮಂಗಳೂರು ಜಿಲ್ಲೆಯಲ್ಲಿ ಪ್ರತ್ಯರ್ಜಿದಾರರೊಂದಿಗೆ ವಿಧಿವತ್ತಾಗಿ ನೆರವೇರಿತ್ತೆಂಬುದು ವಿವಾದಿತವಲ್ಲ. ವಿವಾಹದ ಸಮಯದಲ್ಲಿ, ಅಪೀಲುದಾರನಿಗೆ 38 ವರ್ಷಗಳ ವಯಸ್ಸಾಗಿದೆ ಮತ್ತು ಗುಜರಾತ್‌ನಲ್ಲಿ ಮೊಬೈಲ್ ಅಂಗಡಿಯನ್ನು ನಡೆಸುತ್ತಿದ್ದಾನೆಂಬ ಸಂಗತಿಯನ್ನು ಸಹ ಒಪ್ಪಿಕೊಳ್ಳಲಾಗಿದೆ. ವಿವಾಹದ ದಿನದ ರಾತ್ರಿಯಂದು ಪ್ರತ್ಯರ್ಜಿದಾರಳಾದ ಆಕೆಯ ನಡವಳಿಕೆಯಲ್ಲಿ ಅಸಹಜತೆಯಿರುವುದನ್ನು ಆತನು ಗಮನಿಸಿದ್ದಾನೆ ಮತ್ತು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವುದನ್ನು ಗಮನಿಸಿದ್ದಾನೆ, ಪ್ರತ್ಯರ್ಜಿದಾರರ ಸಂಬಂಧಿಗಳು ಮತ್ತು ಆಕೆಯ ತಾಯಿಗೆ ಅದನ್ನು ಕೂಡಲೇ ಬಹಿರಂಗಪಡಿಸಲಾಗಿದೆಯೆಂಬುದು ಅಪೀಲುದಾರನ ಆಪಾದನೆಯಾಗಿದೆ. ಪ್ರತ್ಯರ್ಜಿದಾರರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವುದನ್ನು ಮರೆಮಾಚಿ ಆತನೊಂದಿಗೆ, ಪ್ರತ್ಯರ್ಜಿದಾರಳಿಗೆ ವಿವಾಹ ಮಾಡಲಾಗಿದೆಯೆಂದು ಮುಂದುವರೆದು ಆಪಾದಿಸಿದ್ದಾರೆ.

7. ಕೌಟುಂಬಿಕ ನ್ಯಾಯಾಲಯದ ಸಮನ್ಸ್‌ಗಳ ಜಾರಿಯ ತರುವಾಯ, ಪ್ರತ್ಯರ್ಜಿದಾರಳು ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ ಇಲ್ಲವೆ, ಆಕೆಯ

1. ಐಎಲ್‌ಆರ್ 1996 ಕೆಎಆರ್ 3615

ಪ್ರತಿನಿಧಿಯಾಗಿ ಪಾಲಕರಂತೆ ಹಾಜರಾಗುವುದಕ್ಕೂ ಸಹಾ ಆಕೆಯ ಸಂಬಂಧಿಕರು ಯಾರೂ ಮುಂದೆ ಬಂದಿರುವುದಿಲ್ಲ. ನ್ಯಾಯಾಲಯದ ಪರವಾಗಿನ ಪಾಲಕರನ್ನು, ಸಿಪಿಸಿಯ ಕ್ರಮಾದೇಶ 32ರ 3ನೇ ನಿಯಮದ ಅಡಿಯಲ್ಲಿ ಅರ್ಜಿದಾರಳಿಂದ ದಾಖಲು ಮಾಡಿದ ಅರ್ಜಿಯನ್ನು ಅನುಸರಿಸಿ ನೇಮಿಸಲಾಗಿದೆ. ಪ್ರತ್ಯರ್ಜಿದಾರ ಮತ್ತು ಆಕೆಯ ಸಂಬಂಧಿಗಳಿಂದ ಸೂಚನೆಗಳನ್ನು ಪಡೆದುಕೊಂಡ ತರುವಾಯ ನ್ಯಾಯಾಲಯದ ಪರವಾಗಿನ ಪಾಲಕರು, ಅಪೀಲುದಾರನಿಂದ ಮಾಡಿದ ಎಲ್ಲಾ ಆಪಾದನೆಗಳನ್ನು ಅಲ್ಲಗೆಳೆದು ಪ್ರತಿವಾದವನ್ನು ಮಂಡಿಸಿದ್ದಾರೆ. ಪ್ರತ್ಯರ್ಜಿದಾರಳ ಹಿರಿಯ ಸಹೋದರಿ ಶ್ರೀಮತಿ ಪ್ರಮೀಳಾ ದಿವಾಕರ ಶೆಟ್ಟಿಯನ್ನು ಪ್ರತ್ಯರ್ಜಿದಾರ ಸಾಕ್ಷಿ.1 ಆಗಿ ಪರೀಕ್ಷಿಸಲಾಗಿದೆ. ಪ್ರತ್ಯರ್ಜಿದಾರಳು, ಆರೋಗ್ಯವಂತಳಾಗಿದ್ದಳು, ಉತ್ತಮ ಮಾನಸಿಕ ಆರೋಗ್ಯವನ್ನಿಟ್ಟುಕೊಂಡಿದ್ದಳು, ಆದರೆ, ವಿವಾಹದ ದಿನಾಂಕದಂದು ಮಾತ್ರ, ಆತನು, ಖಾಯಂವಾಗಿ ವಾಸಿಸುತ್ತಿರುವ ಗುಜರಾತಿಗೆ, ಆಕೆಯನ್ನು ಕರೆದುಕೊಂಡು ಹೋಗುವುದಿಲ್ಲ ಮತ್ತು ತನ್ನ ತವರೂರಿನ ಸ್ವಂತ ಸ್ಥಳದಲ್ಲಿ ತನ್ನ ತಾಯಿಯೊಂದಿಗೆ ವಾಸಿಸಬೇಕೆಂದು ಆಕೆಗೆ ಹೇಳಿದ್ದು, ಕೇಳಿ ಆಕೆಯು ಆಘಾತಗೊಂಡು ಖಿನ್ನತೆಗೊಳಪಡುವಂತೆ ಮಾಡಿದೆ ಹಾಗೂ ಆಕೆಯು ಅಸಹಜವಾಗಿ ವರ್ತಿಸುವಂತೆ ಘಾಸಿಗೊಂಡಿದ್ದಾಳೆಂಬುದು ಆಕೆಯ ವಾದವಾಗಿದೆ. ಅಪೀಲುದಾರರ ನಡವಳಿಕೆಯಿಂದ ಮಾತ್ರ ಮಾನಸಿಕ ಖಿನ್ನತೆ ಉಂಟಾಗಿದೆಯೆಂದು ಸಹಾ ಆಕೆ ನಿವೇದಿಸಿದ್ದಾರೆ. ಕೌಟುಂಬಿಕ ನ್ಯಾಯಾಲಯವು, ಪಕ್ಷಕಾರರಿಂದ ಮಂಡಿಸಲಾದ ಸಾಕ್ಷ್ಯವನ್ನು ವಿವೇಚಿಸಿದೆ ಮತ್ತು ಅಪೀಲುದಾರನು, ಈ ವಿಷಯ ತಿಳಿಯದೆ ವಿವಾಹಕ್ಕೆ ಸಮ್ಮತಿಸಿದ್ದಾನೆ ಹಾಗೂ ಪ್ರತ್ಯರ್ಜಿದಾರ ಮತ್ತು ಆಕೆಯ ಸಂಬಂಧಿಗಳು ಮೋಸದ ಆಟವಾಡಿದ್ದಾರೆ ಹಾಗಾಗಿ, ತೀರ್ಪಿನ ದಿನಾಂಕದಿಂದ ಜಾರಿಗೆ ಬರುವಂತೆ ಶೂನ್ಯಗೊಳಿಸುವ ಡಿಕ್ರಿಯ ಮೂಲಕ ಅಪೀಲುದಾರ ಮತ್ತು ಪ್ರತ್ಯರ್ಜಿದಾರಳ ನಡುವಿನ ವಿಧಿವತ್ತಾದ ವಿವಾಹವನ್ನು ರದ್ದುಗೊಳಿಸಲಾಗಿದೆಯೆಂಬ ನಿರ್ಣಯಕ್ಕೆ ಬರಲಾಗಿದೆ.

8. ಪ್ರತ್ಯರ್ಜಿದಾರರ ಕಿರಿಯ ವಯಸ್ಸನ್ನು ಪರಿಗಣಿಸಿದ ಕೌಟುಂಬಿಕ ನ್ಯಾಯಾಲಯವು, ವಿವಾಹದ ತರುವಾಯದ ದಿನದಿಂದಲೇ ಆಕೆ ಪೋಷಕರ

ಮನೆಯಲ್ಲಿ ವಾಸಿಸಬೇಕಾಗಿರುವುದನ್ನು ಗಣನೆಗೆ ತೆಗೆದುಕೊಂಡು ಮತ್ತು ಪ್ರತ್ಯರ್ಜಿದಾರಳ ಆರ್ಥಿಕ ಸ್ಥಿತಿಗತಿಗಳು ದುಸ್ತರವಾಗಿರುವುದನ್ನು ಆಕೆಗೆ ಯಾವುದೇ ಸ್ವಂತ ಆದಾಯ ಇಲ್ಲದಿರುವುದನ್ನು ಮತ್ತು ಪ್ರತ್ಯರ್ಜಿದಾರಳ ಪೋಷಕರು ವಿವಾಹಕ್ಕಾಗಿ ಮಾಡಲಾಗಿರುವ 3,00,000/– ರೂಪಾಯಿಗಳ ವೆಚ್ಚವನ್ನು, ಸಾಕ್ಷ್ಯದ ಪ್ರಕಾರ, ಪರಿಗಣಿಸಿ ಆಕೆಗೆ ಖಾಯಂ ವಾದಕಾಲೀನ ಜೀವನಾಂಶಕ್ಕಾಗಿ 3,00,000/– ರೂಪಾಯಿಗಳ ಐತೀರ್ಪು ನೀಡಲಾಗಿದೆ. ಕೌಟುಂಬಿಕ ನ್ಯಾಯಾಲಯವು, ಪಕ್ಷಕಾರರ ಮೇಲಿನ ತೀರ್ಪುಗಳ ಆಧಾರದ ಹಿನ್ನೆಲೆಯಲ್ಲಿ ಈ ಅಧಿನಿಯಮದ 12(2)(ಎ)(ii)ನೇ ಪ್ರಕರಣದ ಉಪಬಂಧಗಳನ್ನು ವಿಸ್ತಾರವಾಗಿ ಪರಿಗಣಿಸಿದೆ ಮತ್ತು ಅದಕ್ಕನುಸಾರವಾಗಿ, ಈ ನ್ಯಾಯಾಲಯ ಮಾಡಿದ ಶೂನ್ಯಗೊಳಿಸುವ ಡಿಕ್ರಿಯ ಪ್ರಕರಣದಲ್ಲಿ ಸಹ, ಪತ್ನಿಯು, ಜೀವನಾಂಶ ಅಥವಾ ಖಾಯಂ ವಾದಕಾಲೀನ ಜೀವನಾಂಶಕ್ಕೆ ಹಕ್ಕುಳ್ಳವಳಾಗಿರುತ್ತಾಳೆಯೆಂದು ಅಭಿಪ್ರಾಯಪಟ್ಟಿದೆ.

9. ಪ್ರತ್ಯರ್ಜಿದಾರಳು, ಹಿಂದೂ ವಿವಾಹ ಅಧಿನಿಯಮ, 1956ರ 25ನೇ ಪ್ರಕರಣದ ಅಡಿಯಲ್ಲಿ ಐಎ VIIನ್ನು ದಾಖಲು ಮಾಡಿದ್ದಾರೆಂಬುದನ್ನು ನಾವು ಗಮನಿಸಿದ್ದೇವೆ. ಶೂನ್ಯಗೊಳಿಸುವ ಡಿಕ್ರಿಯಿಂದ ಬಳಲುತ್ತಿರುವ ಪತ್ನಿ/ಪತಿಯು, ಈ ಉಪಬಂಧದ ಅಡಿಯಲ್ಲಿ ಜೀವನಾಂಶ/ಖಾಯಂ ವಾದಕಾಲೀನ ಜೀವನಾಂಶಕ್ಕೆ ಸಹ ಹಕ್ಕುಳ್ಳವರಾಗಿರುತ್ತಾರೆ. ಈ ಅಧಿನಿಯಮದ 25ನೇ ಪ್ರಕರಣದ, ಅಡಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದ ಯಾವುದೇ ನ್ಯಾಯಾಲಯ, ಯಾವುದೇ ಡಿಕ್ರಿಯನ್ನು ಮಾಡಿದ ಸಮಯದಲ್ಲಿ ಖಾಯಂ ವಾದಕಾಲೀನ ಜೀವನಾಂಶ/ಜೀವನಾಂಶ ನೀಡುವುದಕ್ಕೆ ಅಧಿಕಾರಗಳನ್ನು ನೀಡಲಾಗಿದೆಯೆಂಬ ಉಪಬಂಧವು ಸಮರ್ಥನೀಯವಾಗಿದೆ. ಈ ಅಧಿನಿಯಮದ 25ನೇ ಪ್ರಕರಣದಲ್ಲಿ ನಮೂದಿಸಲಾದ 'ಪತ್ನಿ ಅಥವಾ ಪತಿ' ಎಂಬ ಪದಗಳನ್ನು, ಯಾವುದೇ ಡಿಕ್ರಿಯನ್ನು ಮಾಡಿದ ಸಮಯದಲ್ಲಿ ಸಂಬಂಧಿಸಿದ ಪದಗಳಿಂದ ಪರಿಣಾಮತ್ವವನ್ನು ಪಡೆದುಕೊಂಡಿವೆ. ಈ ಅಧಿನಿಯಮದ 25ನೇ ಪ್ರಕರಣವನ್ನು ಸಾವಕಾಶವಾಗಿ ಓದಿದಾಗ, ಅಧಿನಿಯಮದ ಅಡಿಯಲ್ಲಿ (ಯಾವುದೇ ಡಿಕ್ರಿ) ವಿವಾಹವನ್ನು ಅನೂರ್ಜಿತವೆಂದು ಘೋಷಿಸಿದ ವಿವಾಹದ ಪ್ರಕರಣಗಳಲ್ಲಿ ಸಹ ಖಾಯಂ ವಾದಕಾಲೀನ ಜೀವನಾಂಶ/ಜೀವನಾಂಶವನ್ನು

ಕ್ಲೇಮು ಮಾಡಲು ಪತ್ನಿಯ ಹಕ್ಕನ್ನು ಯಾರೂ ಕಸಿದುಕೊಳ್ಳಲಾಗದು ಎಂಬುದನ್ನು ತಿಳಿಸುತ್ತದೆ. ಹಾಗಾಗಿ, ಅಪೀಲುದಾರ ಮತ್ತು ಪ್ರತ್ಯರ್ಜಿದಾರರ ನಡುವೆ ವಿಧಿವತ್ತಾಗಿ ನಡೆದಿದ್ದ ವಿವಾಹವನ್ನು ಶೂನ್ಯಗೊಳಿಸುವ ಡಿಕ್ರಿಯಿಂದ ರದ್ದುಗೊಳಿಸಲಾಗಿದ್ದರೂ, ಈ ಅಧಿನಿಯಮದ 25ನೇ ಪ್ರಕರಣವು, ಅನ್ವಯವಾಗುತ್ತದೆಂದು ನಾವು ಅಭಿಪ್ರಾಯಪಟ್ಟಿದ್ದೇವೆ. ಕೌಟುಂಬಿಕ ನ್ಯಾಯಾಲಯ ಐತೀರ್ಪು ನೀಡಿದ ಖಾಯಂ ವಾದಕಾಲೀನ ಜೀವನಾಂಶ ಅಥವಾ 3,00,000/– ರೂಪಾಯಿಗಳ ಜೀವನಾಂಶ, ಮೊಬೈಲ್ ಅಂಗಡಿಯನ್ನು ನಡೆಸುತ್ತಿರುವ ಅಪೀಲುದಾರನು ವ್ಯಾಪಾರಕ್ಕೆ ಅಭಿಮುಖವಾಗಿ ಆಕೆಯ ಜೀವನಕ್ಕಾಗಿ ವೈದ್ಯಕೀಯ ನೆರವು, ಆಹಾರ, ಬಟ್ಟೆ ಮತ್ತು ಆಸರೆಗಾಗಿ ಇಲ್ಲಿನ ಪ್ರತ್ಯರ್ಜಿದಾರರ ಈ ಪ್ರಕರಣದ ವಾಸ್ತವಿಕ ಹಿನ್ನೆಲೆಯಲ್ಲಿ ಪರಿಗಣನೆಗೆ ತೆಗೆದುಕೊಂಡಿರುವುದು ಸಮರ್ಥನಿಯವಾಗಿದೆ ಮತ್ತು ಈ ನ್ಯಾಯಾಲಯದಿಂದ ಯಾವುದೇ ಹಸ್ತಕ್ಷೇಪವನ್ನು ಬಯಸುವುದಿಲ್ಲ. ಕೌಟುಂಬಿಕ ನ್ಯಾಯಾಲಯದ ತೀರ್ಪಿನ ದಿನಾಂಕದಿಂದ ಜಾರಿಯಾಗಿ ಶೂನ್ಯವಾಗಿರುವ ವಿವಾಹವನ್ನು ಘೋಷಿಸಿದ ತೀರ್ಪಿನ ಭಾಗವು ಅಂಗೀಕರಿಸಲಾಗಿದೆ/ಅಪೀಲುದಾರನಿಂದ ಪ್ರಶ್ನಿಸಲಾಗಿರುವುದಿಲ್ಲವೆಂಬ ಟಿಪ್ಪಣಿಯು ಸಹ ಮಹತ್ವದಾಗಿದೆ. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಅವಲಂಬಿಸಿರುವ ಆ ತೀರ್ಪು ಈ ಪ್ರಕರಣದ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

ಅದಕ್ಕನುಸಾರವಾಗಿ ಗುಣರಹಿತವಾಗಿರುವುದರಿಂದ ಈ ಅಪೀಲನ್ನು ನಾವು ವಜಾಗೊಳಿಸಿದ್ದೇವೆ.

---